ಮಾಡುತ್ತಿರುವೆನೋ, ಅದಕ್ಕೆ ಲಾಭವನ್ನೂ ಪಡೆದೆ ಎಂದು ಅರ್ಥವಾಗುತ್ತದೆ. ನಮ್ಮ ಕೆಲಸಗಳಲ್ಲಿ ಮರೆತೂ ಸಹ ಇಂಥ ಲಾಭದ ವಿಚಾರ ಬರಬಾರದು. ಇದು ಕತ್ತಿಯ ಅಲಗಿನ ಮೇಲೆ ನಡೆಯುವಂಥ ಕೆಲಸವಾಗಿದೆ.'

'ಅಂದರೆ? ಅಂದರೆ ನೀವು ಅವರ ಸ್ನೇಹವನ್ನು ತಿರಸ್ಕರಿಸಿದಿರ?' ಬಾ ಅವರು ಸ್ವಲ್ಪ ವ್ಯಗ್ರರಾದರು.

'ಇಲ್ಲ...' ಬಾಪೂ ಹೇಳಿದರು, 'ಡಾ. ಮೆಹತಾ ಅವರ ಮಾತಿನಲ್ಲಿ ವ್ಯವಹಾರದ ವಿಷಯವಿರಲಿಲ್ಲ. ಅದಕ್ಕೇ ನಾನು ಅವರ ಮಾತನ್ನಂತೂ ಒಪ್ಪಿದೆ, ಆದರೆ...'

'ಆದರೇನು, ಬಾಪೂಜಿ?' ಹರಿಲಾಲ ಮತ್ತೂ ವ್ಯಗ್ರನಾದ. 'ಆದರೆ ನಾನು ಅವರಿಗೆ, 'ಡಾಕ್ಟರ್, ನಿಮ್ಮ ಅಭಿಪ್ರಾಯದಂತೆ ನಾನೊಂದು ವೇಳೆ ನನ್ನ ಮಗನನ್ನು ಆಯ್ಕೆ ಮಾಡಿದರೆ, ಇದೊಂದು ತಪ್ಪು ಸಂಪ್ರದಾಯ ಬೆಳೆಯುವುದು. ಸಾರ್ವಜನಿಕ ಸೇವೆಯ ಕೆಲಸದಲ್ಲಿ ಮಗ್ನರಾಗಿರುವ ನಮ್ಮ ಪರಿವಾರದ ಅತಿ ಸಮೀಪದ ಸದಸ್ಯರಿಗೆ ಇಂಥ ಲಾಭ ಪಡೆಯುವುದರಿಂದ ತಡೆಯಬೇಕು, ಒಂದು ವೇಳೆ ಹೀಗೆ ಮಾಡದಿದ್ದರೆ, ಸಮಾಜ ಸೇವೆಯ ಕ್ಷೇತ್ರ, ಭ್ರಷ್ಟಾಚಾರಿಗಳಿಂದ ತುಂಬಿ ತುಳುಕುತ್ತದೆ' ಎಂದು ಹೇಳಿದೆ.'

'ಅಲ್ಲ, ನೀವು ಹೇಳುವುದಾದರೂ ಏನೂಂತ...?' ಬಾ ಅವರು ಸಹ ಕಳವಳಗೊಂಡರು.

'ಡಾ.ಮೆಹತಾ ಅವರ ಪ್ರಸ್ತಾವನ್ನು ನಾನೊಪ್ಪಿಕೊಂಡಿದ್ದೇನೆ, ಆದರೆ ಅದರಲ್ಲಿ ಒಂದು ತಿದ್ದುಪಡಿಯನ್ನು ಮಾಡಿಸಿದ್ದೇನೆ. ವಿದೇಶದ ಅಧ್ಯಯನಕ್ಕೆ ಹೋಗಲು ಆಶ್ರಮದಿಂದ ಯಾರನ್ನಾದರೂ ಬೇಕಾದರೆ ಅವನು ನನ್ನ ಮಗನಾಗಿರಲಿ ಅಥವಾ ಬೇರೆಯವನಾಗಿರಲಿ...! ಕಳುಹಿಸಲಾಗುವುದು ಎಂದು ತಿಳಿಸಿದ್ದೇನೆ. ಡಾ.ಮೆಹತಾ ಅವರು ಈ ವಿಷಯವನ್ನು ಉದಾರವಾಗಿ ಒಪ್ಪಿಕೊಂಡರು.'

ಹರಿಲಾಲನ ತಾಳ್ಮೆಯ ಕಟ್ಟೆ ಒಡೆಯಿತು. ಅದೆಷ್ಟೋ ದಿನಗಳಿಂದ ಅವನ ಮನಸ್ಸಿನಲ್ಲಿ ನಡೆಯುತ್ತಿದ್ದ ಹೊಯ್ದಾಟ, ಈಗ ಅಸಹ್ಯವೆನಿಸಿತು. ಆದರೆ ಬಾಪೂ ಅವರು ಶಾಂತರಾಗಿ, ನೆಮ್ಮದಿಯಿಂದ ಹೇಳುತ್ತಿದ್ದರು.

'ಆದರೆ, ಹೀಗೇಕೆ ಬಾಪೂಜಿ?'

'ವಿಷಯ ಸ್ಪಷ್ಟವಾಗಿದೆ,' ಬಾಪೂ ಅದೇ ಶಾಂತತೆಯಲ್ಲಿ ಹೇಳಿದರು, 'ಒಂದು ವೇಳೆ ನಾನು ಡಾ.ಮೆಹತಾರವರ ಮಾತನ್ನು ಒಪ್ಪಿಕೊಂಡಿದ್ದರೆ, ನಾನು ದೇಶದ ಸೇವೆ ಮಾಡಿದ್ದಕ್ಕೆ ಬೆಲೆಯನ್ನು ಪರೋಕ್ಷವಾಗಿ ವಸೂಲಿ ಮಾಡಿದೆ ಎಂದಾಗುತ್ತಿತ್ತು. ಶುದ್ಧ ಚಾರಿತ್ರ್ಯದ ಸೇವಕನಿಗೆ ಇದು ಉಚಿತವಲ್ಲ.'

'ಒಂದು ವೇಳೆ ಹೀಗಾದರೂ, ನಿಮ್ಮ ಮಗ ಆಶ್ರಮವಾಸಿ ತಾನೇ?' ಬಾ ಅವರು ನಡುವಿನ ಮಾರ್ಗವನ್ನು ಸೂಚಿಸಿದರು, 'ಡಾ. ಮೆಹತಾರವರು, ಒಬ್ಬ ಆಶ್ರಮವಾಸಿಯನ್ನು ಕಳುಹಿಸುವಂತೆ ಹೇಳಿದ್ದಾರೆ. ನಿಮ್ಮ ಮಾತೂ ಉಳಿಯುವುದು, ಡಾ.ಮೆಹತಾರವರ ಮನಸ್ಸಿಗೂ ನೆಮ್ಮದಿಯಾಗುವುದು.'

'ಇಂಥ ಮಧ್ಯಮ ಮಾರ್ಗವನ್ನು ಹುಡುಕಿ ಆತ್ಮಕ್ಕೆ ದ್ರೋಹವೆಸಗುವುದು ಸತ್ಯಾಗ್ರಹಿಗಳಿಗೆ ಶೋಭೆ ತರುವಂಥದ್ದಲ್ಲ.' ಬಾಪೂ ಶಾಂತಿಯಿಂದಲೇ ಹೇಳಿದರು, 'ಡಾ.ಮೆಹತಾರವರ ಖರ್ಚಿನಲ್ಲಿ ವಿದೇಶಕ್ಕೆ ಹೋಗುವ ಆಶ್ರಮವಾಸಿಯನ್ನು ನಾನು ವಿದೇಶದಲ್ಲಿದ್ದಾಗಲೇ ಆಯ್ಕೆ ಮಾಡಿದ್ದೆ; ಅದಕ್ಕಾಗಿ ಅಲ್ಲಿಂದಲೇ ಪತ್ರವನ್ನೂ ಬರೆದಿದ್ದೆ. ಹಿಂದೂಸ್ತಾನದ ಛಗನ್‌ಲಾಲ್ ಅಧ್ಯಯನಕ್ಕಾಗಿ ನೇರವಾಗಿ ವಿದೇಶಕ್ಕೆ ಹೋಗಬೇಕು...ಅಧ್ಯಯನದ ನಂತರ ದೇಶದ ಸೇವೆಯನ್ನು ಮಾಡಬೇಕು... ವಿದ್ಯೆಯನ್ನು ಹಣ ಸಂಪಾದನೆಗೆ ಬಳಸಬಾರದು. ಜೀವನಪರ್ಯಂತ ಆಶ್ರಮದಿಂದಲೇ ಜೀವನವನ್ನು ಸಾಗಿಸುವ ಪ್ರಯತ್ನವನ್ನು ಮಾಡಬೇಕು ಎಂದು ಶಿಫಾರಸ್ ಮಾಡಿಬಿಟ್ಟಿದ್ದೇನೆ...'

ಹರಿಲಾಲನಿಗೆ ದಿಕ್ಕೇ ತೋಚದಂತಾಯಿತು. ಅವನು ಅಕಸ್ಮಾತ್ ಗಟ್ಟಿ ಸ್ವರದಲ್ಲಿ ಹೇಳಿದ, 'ಆದರೆ... ಆದರೆ...ಛಗನ್‌ಲಾಲ್ ಮಾಡುವ ಕೆಲಸವನ್ನು ನಾನು ಅಥವಾ ಮಣಿಲಾಲ ಯಾಕೆ ಮಾಡಲು ಸಾಧ್ಯವಿಲ್ಲ?'

## ಹನ್ನೆರಡು

ಬಾಪೂ ಅಂತಿಮಗಾಗಿ ಛಗನ್‌ಲಾಲ್‌ನನ್ನು ಆಯ್ಕೆ ಮಾಡಿದ್ದು, ಅವನು ವಿದೇಶಕ್ಕೆ ಹೋಗುವ ಮೊದಲ ಸಿದ್ಧತೆ ಸಹ ಪೂರ್ಣಗೊಂಡಿದೆ, ಇನ್ನು ತಾನು ಅದಕ್ಕಾಗಿ ವಿಲಾಪಿಸುವುದು ವ್ಯರ್ಥ ಎಂಬ ವಿಷಯ ಹರಿಲಾಲನಿಗೆ ಅರ್ಥವಾಗಿತ್ತು. ಇದು ಅವನ ಮನಸ್ಸಿನಲ್ಲಿ ಬೇರೂರಿತು. ಸಿಟ್ಟು ಧಗಧಗಿಸಿತು. ತನಗೆ ಅಥವಾ ಮಣಿಲಾಲನಿಗೆ ವ್ಯರ್ಥವಾಗಿದ್ದ ವಿದೇಶಿ ಶಿಕ್ಷಣ ಛಗನ್‌ಲಾಲ್‌ನ ವಿಷಯದಲ್ಲಿ ದೇಶ ಸೇವೆಯ ಸಾಧನ ಹೇಗಾಗಲು ಸಾಧ್ಯ ಎಂಬುದು ಅವನಿಗೆ ಅರ್ಥವಾಗುತ್ತಿರಲಿಲ್ಲ. ಹರಿಲಾಲ ಬ್ಯಾರಿಸ್ಟರ್ ಆಗಲು ಉತ್ಸುಕನಾಗಿದ್ದ. ಅದಕ್ಕಾಗಿ ಅವನಿಗೆ ಬೇಕಾದ ಸಾಮರ್ಥ್ಯವೂ ಇತ್ತು. ತಾನು ಬಾಪೂ ಅವರಂತೆ ದೇಶದ ಸೇವೆಯನ್ನು ಮಾಡಬಲ್ಲೆ ಎಂಬುದಕ್ಕೆ ಪ್ರತ್ಯಕ್ಷವಾಗಿ ಸಾಕ್ಷಿ ರೂಪದಲ್ಲಿಯೂ ತೋರಿಸಿದ್ದ. ಆದರೂ ಬಾಪೂ ಅವರು ಬ್ಯಾರಿಸ್ಟರ್ ಆಗುವ ಅವಕಾಶವನ್ನು ಮೂರು ಪೀಳಿಗೆ ದೂರದ ಅಂತರದಲ್ಲಿರುವ ಸಹೋದರನ ಮಗನಿಗೆ ಕೊಟ್ಟಿದ್ದರು, ತನಗೆ ಕೊಡಲಿಲ್ಲ. ಬಾಪೂ ಅವರ ಮಗನಾಗಿ ಸಿಗುವ ಪ್ರಯೋಜನವಂತೂ ದೂರದ ಮಾತಾಯಿತು, ಇಲ್ಲಿ ಅದರಿಂದಾಗಿ ನಷ್ಟವೇ ಆಗುತ್ತಿತ್ತು. ಬಾಪೂ ಅವರು ಛಗನ್‌ಲಾಲ್‌ನಿಂದ ಮಾಡಿಸಿಕೊಂಡಿದ್ದ ಪ್ರತಿಜ್ಞೆಗಳು ಫೀನಿಕ್ಸ್ ಆಶ್ರಮದ ತಳಪಾಯದಲ್ಲಿರಲಿಲ್ಲವೇ? ಹರಿಲಾಲ ಫೀನಿಕ್ಸ್ ಆಶ್ರಮದ ಈ ಆದರ್ಶಗಳನ್ನು ಎಂದೋ ಪಾಲಿಸಿಕೊಂಡು ಬರುತ್ತಿದ್ದ. ಹೀಗಿರುವಾಗ....

ಆದರೆ ಹರಿಲಾಲ ತಕ್ಷಣ ಮನಸ್ಸಿಗೆ ತಿಳಿ ಹೇಳಿಕೊಂಡ.

ಹಾಗಂತ ಬಾಪೂ ಅವರ ಯಾವುದೇ ಮಾತು ಎಲ್ಲಿ ಅರ್ಥವಾಗುತ್ತಿತ್ತು?

ಅವನು ಇಲ್ಲಿಗೆ ಮೊದಲ ಬಾರಿಗೆ ಬಾಲ್ಯದಲ್ಲಿ ಬಂದಾಗ ಸುಖದ ಸಾಧನಗಳನ್ನು ಬಾಪೂ ಅವರು ತ್ಯಜಿಸಿದ್ದರು. ಇನ್ನಿತರ ಬ್ಯಾರಿಸ್ಟರ್ಗಳು ಸಾವಿರಾರು ರೂಪಾಯಿಗಳನ್ನು ಗಳಿಸಿ, ಸುಖದ ಸಾಧನಗಳನ್ನು ಸಂಗ್ರಹಿಸಿದ್ದರು, ಆದರೆ ಬಾಪೂ ಅವರು ತಮಗೆ ಲಭಿಸಿದ್ದನ್ನೂ ಸಹ ತ್ಯಜಿಸಿದ್ದರು. ಹರಿಲಾಲನ ಮನಸ್ಸಿನಲ್ಲಿ ಮೊದಲ ಬಾರಿಗೆ, ಈ ಮರದ ದಿಂಬು, ನೆಲಕ್ಕೆ ಒಂದು ತೆಳು ಕಂಬಳಿಯನ್ನು ಹಾಸಿ ಮಾಡಿದ ಹಾಸಿಗೆ, ಕಪ್ಪು ಚಹಾದಲ್ಲಿ ಬ್ರೆಡ್ ಅದ್ದಿ ತಿನ್ನುವುದು ಹಾಗೂ ಬೆಳ್ಳಂಬೆಳಿಗ್ಗೆ ಎದ್ದು ಒಂದು ಕ್ಷಣವೂ ವಿಶ್ರಾಂತಿ ಪಡೆಯದೆ, ಶಾರೀರಿಕ ಶ್ರಮವನ್ನು ವಹಿಸುವುದು ಒಂದು ವೇಳೆ ಇದನ್ನೇ ಸೇವೆ ಎನ್ನುವುದಾದರೆ, ಇದನ್ನು ಹೊರತುಪಡಿಸಿ ಶ್ರಮವಹಿಸಿ ಸೇವೆಯನ್ನು ಮಾಡಿದವರು ಹಾಗೂ ಇಂದೂ ಸಹ ಮಾಡುತ್ತಿರುವವರ ಸೇವೆ ತಪ್ಪೆ?

ಬಾಪೂ ಇಂದು ಬದುಕುತ್ತಿರುವ ರೀತಿ ಹಾಗೂ ತಮ್ಮೊಂದಿಗೆ ತಮ್ಮ ಪರಿವಾರದ ಎಲ್ಲರನ್ನೂ ತೊಡಗಿಸುವುದನ್ನು ನೋಡಿದರೆ, ಇದೇ ನಿಜವಾದ ಜೀವನವೆಂದು ಹೇಗೆ ಹೇಳಲು ಸಾಧ್ಯ? ಆದರೆ ಬಾಪೂ ಅವರ ವಿಷಯವೇ ಬೇರೆ. ಹರಿಲಾಲ ಈ ವಿಷಯವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನವನ್ನೇ ಕೈಬಿಟ್ಟ. ನಂತರ ಮತ್ತೆ ಹೋರಾಟದ ಕಡೆಗೆ ಗಮನ ಹರಿಸಿದ. ಅವನು ಮತ್ತೊಮ್ಮ ಸರ್ಕಾರಕ್ಕೆ, 'ಇಂಥ ದಿನ...ಜೋಹಾನ್ಸ್‌ಬರ್ಗ್ ಸಮೀಪದ ರೈಲ್ವೆ ಸ್ಟೇಷನ್‌ನಿಂದ ನಿರ್ಬಂಧಿತ ಸ್ಥಳವನ್ನು ಪ್ರವೇಶಿಸಲಾಗುವುದು ಮತ್ತು ಕಾನೂನನ್ನು ಭಂಗಗೊಳಿಸಲಾಗುವುದು' ಎಂದು ಸುದ್ದಿಯನ್ನು ಮುಟ್ಟಿಸಿದ.

ಆದರೆ ಈ ಬಾರಿ ಸರ್ಕಾರ ಹರಿಲಾಲನನ್ನು ಸಾಮಾನ್ಯ ಸತ್ಯಾಗ್ರಹಿ ಅಥವಾ ಸಾಮಾನ್ಯ ಸ್ವಯಂಸೇವಕನೆಂದು ಪರಿಗಣಿಸಲಿಲ್ಲ. ಹೋರಾಟದ ಮಾರ್ಗದಲ್ಲಿ ಹರಿಲಾಲ ತುಂಬಾ ವೇಗವಾಗಿ ತನ್ನನ್ನು ಗುರುತಿಸಿಕೊಂಡಿದ್ದ. ಹೀಗಾಗಿ ಸರ್ಕಾರ ಅವನ ಬಗ್ಗೆ ಈಗ ಕಣ್ಣುಮುಚ್ಚಿ ಕುಳಿತಿರಲಿಲ್ಲ. ಹರಿಲಾಲನನ್ನು ಜೋಹಾನ್ಸ್‌ಬರ್ಗ್ ರೈಲ್ವೆ ಸ್ಟೇಷನ್‌ನಲ್ಲಿಯೇ ಬಂಧಿಸಲಾಯಿತು. ಹರಿಲಾಲ ಪೊಲೀಸ್‌ಅಧಿಕಾರಿಗಳನ್ನು ಲೇಶಮಾತ್ರವೂ ವಿರೋಧಿಸಲಿಲ್ಲ. ಸ್ಟೇಷನ್‌ನ ಪ್ಲಾಟ್‌ಫಾರ್ಮ್‌ನಲ್ಲಿ ಬಿದ್ದಿದ್ದ ತನ್ನ ಲಗ್ಗೇಜುಗಳನ್ನು ಸಹ ಮುಟ್ಟದೆ ಪೊಲೀಸ್‌ವಾಹನದಲ್ಲಿ ಕೂರಲು ಸಿದ್ಧನಾದ.

'ಮಿಸ್ಟರ್ ಗಾಂಧಿ,' ಆಂಗ್ಲ ಪೊಲೀಸ್‌ಅಧಿಕಾರಿ ದರ್ಪದಿಂದ ಆದೇಶಿಸಿದ, 'ಒಂದು ವೇಳೆ ನಿನಗೆ ಈ ಸಾಮಾನುಗಳು ಜೈಲಿನಲ್ಲಿ ಬೇಕಾದರೆ, ನೀನೇ ಇದನ್ನು ತೆಗೆದುಕೊಳ್ಳಬೇಕು. ನೀನು ಇಲ್ಲಿಂದ ನೇರವಾಗಿ ಜೈಲಿಗೇ ಹೋಗಬೇಕು, ಅದೂ ನಗರದ ಬೀದಿಗಳಲ್ಲಿ ಕಾಲ್ನಡಿಗೆಯಲಲ್ಲಿ ಹೋಗಬೇಕು. ಸರ್ಕಾರಿ ವಾಹನ ನಿನಗಲ್ಲ.'

ಹರಿಲಾಲನಿಗೆ ವಿಚಿತ್ರವಾಗಿ ಕಂಡಿತು. ಸ್ಟೇಷನ್‌ನಲ್ಲಿ ಜಮಾಯಿಸಿದ ಗುಂಪು 'ನಾಚಿಕೆಗೇಡು ನಾಚಿಕೆಗೇಡು' ಎಂದು ಕಿರುಚಲು ಆರಂಭಿಸಿತು. ಪೊಲೀಸ್‌ಅಧಿಕಾರಿಗಳು ಲಾಠಿಯನ್ನು ಬೀಸಿದರು. ಜನ, 'ಚಿಕ್ಕ ಗಾಂಧಿಯವರಿಗೆ ಜಯವಾಗಲಿ' ಎಂದು ಘೋಷಣೆ ಹಾಕಿದರು. ಪೊಲೀಸರು ಗುಂಪಿನೆಡೆಗೆ ದೌಡಾಯಿಸಿ ಬಂದರು. ಗುಂಪು ನಾಲ್ಕೂ ಕಡೆಗೆ ಚದುರಿತು.

(ಸಶೇಷ)